# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೦೮, ಮೇ, ೨೦೨೬ (ವೈಶಾಖ, ೧೮, ಶಕವರ್ಷ, ೧೯೪೮)<br>BENGALURU, FRIDAY, 08, MAY, 2026 ( VAISHAKHA , 18, SHAKAVARSHA, 1948) | ನಂ. ೩೬೨<br>No. 362 |
|---|---|---|


## GOVERNMENT OF KARNATAKA

No. FD 11 PES 2025

Karnataka Government Secretariat
Vidhana Soudha,
Dr. B.R. Ambedkar Veedhi,
Bengaluru, Dated: 08.05.2026.

## NOTIFICATION-I

The draft of the following Rules to further amend the Karnataka Excise (Distillery and Warehouse) Rules, 1967, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said section for information of all persons likely to be affected thereby and notice is hereby given that the said draft will be taken up for consideration after seven days from the date of its publication in the official Gazette.

Any objections or suggestions which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

## DRAFT RULES

**1. Title and commencement:-** (1) These Rules may be called the Karnataka Excise (Distillery and Warehouse) (Second Amendment) Rules, 2026.

(2) They shall come into force from the date of their final publication in the official Gazette.

**2. <u>Amendment of Rule 2:-</u>** In the Karnataka Excise (Distillery and Warehouse) Rules, 1967 (hereinafter referred to as the 'said rules'), in rule 2, after clause (d), the following shall be inserted, namely:-

**"(dd) "Distillery Factory Out-let"** means a place which is separated from the manufacturing area but situated within the Distillery licensed premises preferably away from the main Entrance/Exit gate, where the licensee is permitted to serve food and may allow a visitor to taste Liquor manufactured in such manufacturing unit and may also sell such Liquor to the visitors in sealed bottles or other sealed packaging containers of not less than 375 ml size but not exceeding a maximum quantity prescribed for respective categories of liquor under Rule 21 of the Karnataka Excise (Possession, Transport, Import and Export of Intoxicants) Rules, 1967.

**3. <u>Insertion of new rule 4-E:-</u>** In the said rules, after Rule 4-D, the following rules shall be inserted, namely:-

**"4-E. Licence for Distillery Factory Out-let –** (1) Any holder of Distillery Licence who is desirous of establishing a Distillery Factory Out-let in the manufacturing Unit shall make an application to the Excise Commissioner in Form 2-B through the Deputy Commissioner of Excise alongwith a challan for having credited the fee specified in sub-rule (3). The application shall be accompanied with full description of area designated for Distillery Factory Out-let showing plan, seating arrangement, refreshment room and separate toilet with running water facilities for men and women but separated from manufacturing area. The Excise Commissioner, after making such inquiry as he thinks necessary with regard to the particulars stated in the application may grant licence in Form 2-C to establish Distillery Factory Out-let, subject to these rules and the conditions specified in the licence.

(2) The licence granted or issued under these rules shall take effect from the date specified in the licence and shall be valid for a period of 5 (five) Excise years including the year of grant or issuance, subject to annual payment at the rate equal to the licence fee and additional licence fee. However, the licence shall lapse or expire on the day when the Distillery licence granted/renewed under Rule 4 and Rule 6 of these rules is lapsed or expired.

(3) The fee for grant or renewal of Distillery Factory Out-let licence shall be rupees Four lakhs per year and an additional licence fee equivalent to fifteen percent of the licence fee.

(4) The Excise Commissioner on an application made by the licensee accompanied by the licence fees prescribed under sub-rule (3) may renew the licence.

Provided that, every such application shall be made at least one month before the expiry of the licence already granted.

(5) The liquor which is used for tasting purpose or sold at the Distillery Factory Out-let in sealed bottles or other sealed packaging containers shall be obtained from Karnataka State Beverages Corporation Limited (KSBCL) in accordance with the Karnataka Excise (Possession, Transport, Import and Export of Intoxicants) Rules, 1967.

(6) The licensee under sub-rule (1) shall maintain correct daily accounts of transactions in Stock Book-1 as prescribed in Form 15.

(7) The licence issued under sub-rule (1) may be transferred only when the Distillery licence is transferred as per Rule 4-B or Rule 4-C of these rules. In case of transfer of licence under Rule 4-C, the licence transfer fee shall be equivalent to twenty-five percent of the annual licence fees specified in sub-rule (3).

(8) The privilege under this licence extends to tasting or sale of liquor to only the visitors who visit the Distillery under the concept of Alcohol tourism. No sale of liquor in wholesale or to the non-visitors are permitted under this licence**".**

**4. <u>Insertion of new Forms 2-B and 2-C:-</u>** In the said Rules, after Form 2-A the following Forms shall be inserted, namely:-

**"FORM 2-B**
**(See Rule 4-E)**

**Application for grant of Distillery Factory Out-let licence**

**To,**
The Excise Commissioner in Karnataka,
Bengaluru

| | | |
|---|---|---|
| 1. | Name and Address of the Distillery | |
| 2. | Whether individual or firm or Company | |
| (a) | If a firm, furnish the names and addresses of all partners and copy of the Partnership deed; | |

| | | |
|---|---|---|
| (b) | If a Company, furnish a copy of the Memorandum of Association and Articles of Association together with names and addresses of all the Directors of the Company. | |
| 3. | Details of the fees paid | |
| 4. | Details of the staff of Distillery Factory Out-let | |
| 5. | Details of the premises used as Distillery Factory Out-let as shown in the Blue Print | |

**DECLARATION**

1. I/We hereby declare that the particulars mentioned in the application are correct.
2. I/We am/are not disqualified from submission of application for the reasons mentioned in Rule 6-A of the Karnataka Excise (Distillery and Warehouse) Rules, 1967.
3. I/We have gone through the Karnataka Excise (Distillery and Warehouse) Rules, 1967, relating to the licence applied for and am/are conversant with the provisions thereof.
4. I/We are hereby undertake to abide by the conditions of the licence and provisions of the Karnataka Excise Act, 1965 and the Rules and regulations made thereunder.

Place:
Date: **Name and Signature(s) of the Applicant(s)**

**FORM 2-C**
**[See Rule 4-E]**
**Licence to allow Tasting of and to sell Liquor on the premises of Distillery Factory Out-let**

**LICENCE NO. ……… Dated: ……..**

| | | |
|---|---|---|
| 1. | Name and Address of the Distillery<br><br>Licence No. of Distillery | |
| 2. | District in which the Distillery is located | |
| 3. | Details of fees paid | |

I, ………………the Excise Commissioner in Karnataka under the provisions of Rule 4-E of the Karnataka Excise (Distillery and Warehouse) Rules, 1967, hereby licence you ……………… (hereinafter called the "licensee") to run a Distillery Factory Out-let at premises ……………… of the Distillery from ………..to…………..subject to the following conditions to be observed by you, the licensee:-

## CONDITIONS

1. The licensee shall be bound by the provisions of the Karnataka Excise Act, 1965, Notifications, Rules and Orders made or issued thereunder and the Karnataka Excise (Distillery and Warehouse) Rules, 1967.
2. The licensee shall observe such rules as may be prescribed by the State Government or such instructions and Orders as may be issued by the Excise Commissioner from time to time in regard to the control of sale, possession and issue of Liquor.
3. The licensee shall source the supply of Liquor subject to Rule 4-E of the Karnataka Excise (Distillery and Warehouse) Rules, 1967.
4. The maximum quantity of Liquor that may be sold to a visitor in sealed bottles or other sealed packaging containers of not less than 375 ml size shall not exceed the maximum quantity prescribed for respective categories of liquor under Rule 21 of the Karnataka Excise (Possession, Transport, Import and Export of Intoxicants) Rules, 1967.
5. The licensee shall sell Liquor at the Maximum Retail Price (MRP) indicated on the labels of the bottles as declared under Rule 2-AF of the Karnataka Excise (Excise Duties and Fees) Rules, 1968 and issue bills to the visitors accordingly.
6. The visitor may be allowed to taste Liquor manufactured from the same licensee. However, the quantity of sample of each Liquor shall not exceed 30 ml.
7. Liquor which is used for tasting purpose or sold at the Distillery Factory Out-let in sealed bottles or other packaging containers shall be procured by the licensee against permit from Karnataka State Beverages Corporation Limited (KSBCL) only.
8. The licensee shall ensure metric measures approved by the Department of Legal Metrology.
9. The licence shall not be transferred unless in accordance with the rules.
10. The authorized persons or the vendor as the case may be shall equally with the licence holder be responsible for breach of any of the conditions of the licence.
11. The licence may be suspended or cancelled in accordance with the provisions of Section 29 of the Act and the licensee and his employee shall be liable for prosecution of breach of any conditions of licence under the provisions of the Act or the Rules and orders may there under.
12. The licence shall continue to be in force till ………..
13. The licensee is bound to maintain correct daily accounts of transactions in the Stock Book-1 in Form 15 and submit the return every month to the Distillery Excise Officer concerned within first week of the following month.
14. The details of the visitors to the Distillery Factory Out-let shall be maintained.
15. The opening and closing hours of the Distillery Factory Out-let shall be from 10.00 am to 7.00 pm.

**Excise Commissioner"**

**5. <u>Insertion of new Form 15:-</u>** In the said Rules, after Form 14 the following Form shall be inserted, namely:-

**"FORM 15**
**[See Rule 4-E (5)]**
**Stock Book-1**

**Daily Account Book to be maintained by the licensee**

| Date | | Brand Name | Brand Name | Brand Name | Brand Name | Signature of the Licensee/authorized person | Remarks |
|---|---|---|---|---|---|---|---|
| | | Bottle size in ml | Bottle size in ml | Bottle size in ml | Bottle size in ml | | |
| | Opening balance | | | | | | |
| | Receipt | | | | | | |
| | Sale | | | | | | |
| | Closing Balance | | | | | | |

**By Order and in the Name of**
**The Governor of Karnataka**
**Sd/-**
**Under Secretary to Government,**
**Finance Department (Excise)**

**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 11 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 08.05.2026.

**ಅಧಿಸೂಚನೆ-I**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಏಳು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

## ಕರಡು ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ** :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) (ಎರಡನೇ ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2 ನೇ ನಿಯಮದ ತಿದ್ದುಪಡಿ**:– ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), ನಿಯಮ 2 ರಲ್ಲಿ, ಖಂಡ (ಡಿ) ರ ತರುವಾಯ ಈ ಮುಂದಿನ ಖಂಡವನ್ನು ಸೇರಿತಕ್ಕದ್ದು, ಅಂದರೆ:-

**"(ಡಿಡಿ) "ಡಿಸ್ಟಿಲರಿ ಫ್ಯಾಕ್ಟರಿ ಔಟ್‌-ಲೆಟ್"** ಎಂದರೆ ಉತ್ಪಾದನಾ ಪ್ರದೇಶದಿಂದ ಬೇರ್ಪಟ್ಟ ಆದರೆ ಡಿಸ್ಟಿಲರಿ ಸನ್ನದು ಪಡೆದ ಆವರಣದೊಳಗೆ ಇರುವ, ಮುಖ್ಯ ಪ್ರವೇಶ/ನಿರ್ಗಮನ ದ್ವಾರದಿಂದ ದೂರದಲ್ಲಿರುವ ಸ್ಥಳ, ಅಲ್ಲಿ ಸನ್ನದುದಾರನು ಆಹಾರವನ್ನು ಪೂರೈಸಲು ಅನುಮತಿ ಇರುತ್ತದೆ ಮತ್ತು ಸಂದರ್ಶಕರಿಗೆ ಅಂತಹ ಉತ್ಪಾದನಾ ಘಟಕದಲ್ಲಿ ತಯಾರಿಸಿದ ಮದ್ಯವನ್ನು ಸವಿಯಲು ಅವಕಾಶ ನೀಡಬಹುದು ಮತ್ತು ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967 ರ ನಿಯಮ 21 ರ ಅಡಿಯಲ್ಲಿ ಆಯಾ ವರ್ಗದ ಮದ್ಯಗಳಿಗೆ ನಿಗದಿಪಡಿಸಿದ ಗರಿಷ್ಠ ಪ್ರಮಾಣವನ್ನು ಮೀರದಂತೆ 375 ಮಿಲಿಗಿಂತ ಕಡಿಮೆಯಿಲ್ಲದ ಮುಚ್ಚಿದ ಬಾಟಲಿಗಳು ಅಥವಾ ಇತರೆ ಮುಚ್ಚಿದ ಪ್ಯಾಕೇಜಿಂಗ್ ಕಂಟೈನರ್‌ಗಳಲ್ಲಿ ಸಂದರ್ಶಕರಿಗೆ ಆ ಮದ್ಯವನ್ನು ಮಾರಾಟ ಮಾಡಬಹುದಾಗಿದೆ.

**3. ಹೊಸ ನಿಯಮ 4-ಇ ಯ ಸೇರ್ಪಡೆ**:– ಸದರಿ ನಿಯಮಗಳ **4-**ಡಿ ನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು**,** ಅಂದರೆ:-

**"4-ಇ. ಡಿಸ್ಟಿಲರಿ ಕಾರ್ಖಾನೆ ಔಟ್-ಲೆಟ್ ಸನ್ನದು –** (1) ಉತ್ಪಾದನಾ ಘಟಕದಲ್ಲಿ ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಸ್ಥಾಪಿಸಲು ಇಚ್ಛಿಸುವ ಯಾವುದೇ ಡಿಸ್ಟಿಲರಿ ಸನ್ನದು ಹೊಂದಿರುವವರು**,** ಉಪ-ನಿಯಮ (3) ರಲ್ಲಿ ನಿರ್ದಿಷ್ಟಪಡಿಸಿದ ಶುಲ್ಕವನ್ನು ಜಮಾ ಮಾಡಿದ್ದಕ್ಕಾಗಿ ಚಲನ್‌ನೊಂದಿಗೆ ಅಬಕಾರಿ ಆಯುಕ್ತರಿಗೆ ನಮೂನೆ 2-ಬಿ ನಲ್ಲಿ ಅಬಕಾರಿ ಉಪ ಆಯುಕ್ತರ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯೊಂದಿಗೆ ಉತ್ಪಾದನಾ ಪ್ರದೇಶದಿಂದ ಪ್ರತ್ಯೇಕಿಸಲ್ಪಟ್ಟ ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್‌ಗಾಗಿ ಗೊತ್ತುಪಡಿಸಿದ ಪ್ರದೇಶದ ಸಂಪೂರ್ಣ ವಿವರಣೆ**,** ಯೋಜನೆ**,** ಆಸನ ವ್ಯವಸ್ಥೆ**,** ಉಪಹಾರ ಕೊಠಡಿ ಮತ್ತು ಪುರುಷರು ಮತ್ತು ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಹರಿಯುವ ನೀರಿನ ಸೌಲಭ್ಯಗಳನ್ನು ಹೊಂದಿರುವ ಶೌಚಾಲಯಗಳ ವ್ಯವಸ್ಥೆಯ ವಿವರಗಳನ್ನು ಒಳಗೊಂಡಿರಬೇಕು. ಅರ್ಜಿಯಲ್ಲಿ ಉಲ್ಲೇಖಿಸಲಾದ ವಿವರಗಳಿಗೆ ಸಂಬಂಧಿಸಿದಂತೆ ಅಗತ್ಯವೆಂದು ಪರಿಗಣಿಸುವಂತಹ ವಿಚಾರಣೆ ನಡೆಸಿದ

ನಂತರ, ಅಬಕಾರಿ ಆಯುಕ್ತರು, ಈ ನಿಯಮಗಳು ಮತ್ತು ಸನ್ನದಿನಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೊಳಪಟ್ಟು, ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಸ್ಥಾಪಿಸಲು ನಮೂನೆ 2-ಸಿ ಯಲ್ಲಿ ಸನ್ನದು ಮಂಜೂರು ಮಾಡಬಹುದು.

(2) ಈ ನಿಯಮಗಳ ಅಡಿಯಲ್ಲಿ ಮಂಜೂರು ಅಥವಾ ನೀಡಲಾಗುವ ಸನ್ನದುಗಳು ಸನ್ನದಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ ಮತ್ತು ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಕ್ಕೆ ಸಮಾನವಾದ ದರದಲ್ಲಿ ವಾರ್ಷಿಕ ಪಾವತಿ ಮಾಡುವ ಒಳಪಟ್ಟು, ಮಂಜೂರಾತಿ ಅಥವಾ ನೀಡಲಾಗಿರುವ ವರ್ಷ ಸೇರಿದಂತೆ 5 (ಐದು) ಅಬಕಾರಿ ವರ್ಷಗಳ ಅವಧಿಗೆ ಮಾನ್ಯವಾಗಿರುತ್ತದೆ. ಆದಾಗ್ಯೂ, ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರ ನಿಯಮ 4 ಮತ್ತು ನಿಯಮ 6 ರ ಅಡಿಯಲ್ಲಿ ಮಂಜೂರಾದ/ನವೀಕರಿಸಿದ ಡಿಸ್ಟಿಲರಿ ಸನ್ನದು ಅವಧಿ ಮುಕ್ತಾಯಗೊಂಡ ಅಥವಾ ಅವಧಿ ಮೀರಿದ ದಿನದಂದು ಸನ್ನದಿನ ಅವಧಿ ಮುಕ್ತಾಯಗೊಳ್ಳುತ್ತದೆ ಅಥವಾ ಅವಧಿ ಮೀರುತ್ತದೆ.

(3) ಡಿಸ್ಟಿಲರಿ ಫ್ಯಾಕ್ಟರಿ ಔಟ್ಲೆಟ್ ಸನ್ನದು ಮಂಜೂರಾತಿ ಅಥವಾ ನವೀಕರಣಕ್ಕೆ ವಾರ್ಷಿಕ ಸನ್ನದು ಶುಲ್ಕ ರೂ.ನಾಲ್ಕು ಲಕ್ಷ ರೂಪಾಯಿಗಳು ಮತ್ತು ಸನ್ನದು ಶುಲ್ಕದ ಹದಿನೈದು ಪ್ರತಿಶತಕ್ಕೆ ಸಮಾನವಾದ ಮೊಬಲಗು ಹೆಚ್ಚುವರಿ ಸನ್ನದು ಶುಲ್ಕವಾಗಿರುತ್ತದೆ.

(4) ಉಪ-ನಿಯಮ (3) ರ ಅಡಿಯಲ್ಲಿ ನಿಗದಿಪಡಿಸಲಾದ ಸನ್ನದು ಶುಲ್ಕಗಳೊಂದಿಗೆ ಸನ್ನದುದಾರನು ಸಲ್ಲಿಸಿದ ಅರ್ಜಿಯ ಮೇರೆಗೆ ಅಬಕಾರಿ ಆಯುಕ್ತರು ಸನ್ನದನ್ನು ನವೀಕರಿಸಬಹುದು.

ಪರಂತು, ಅಂತಹ ಪ್ರತಿಯೊಂದು ಅರ್ಜಿಯನ್ನು, ಈಗಾಗಲೇ ನೀಡಿರುವ ಸನ್ನದಿನ ಅವಧಿ ಮುಗಿಯುವ ಕನಿಷ್ಠ ಒಂದು ತಿಂಗಳ ಮೊದಲು ಸಲ್ಲಿಸತಕ್ಕದ್ದು.

(5) ರುಚಿ ನೋಡುವ ಉದ್ದೇಶಕ್ಕಾಗಿ ಬಳಸಲಾಗುವ ಅಥವಾ ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್‌ನಲ್ಲಿ ಮುಚ್ಚಿದ ಬಾಟಲಿಗಳು ಅಥವಾ ಇತರೆ ಮುಚ್ಚಿದ ಪ್ಯಾಕೇಜಿಂಗ್ ಕಂಟೈನರ್‌ಗಳಲ್ಲಿ ಮಾರಾಟ ಮಾಡುವ ಮದ್ಯವನ್ನು ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967 ರ ಪ್ರಕಾರ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ (ಕೆಎಸ್‌ಬಿಸಿಎಲ್) ನಿಂದ ಪಡೆಯತಕ್ಕದ್ದು.

(6) ಉಪ-ನಿಯಮ (1) ರ ಅಡಿಯಲ್ಲಿ ಸನ್ನದುದಾರನು ನಮೂನೆ 15 ರಲ್ಲಿ ನಿಗದಿಪಡಿಸಿದಂತೆ ಸ್ಟಾಕ್ ಬುಕ್-1 ರಲ್ಲಿ ವಹಿವಾಟುಗಳ ಸರಿಯಾದ ದೈನಂದಿನ ಲೆಕ್ಕಗಳನ್ನು ನಿರ್ವಹಿಸತಕ್ಕದ್ದು.

(7) ಉಪ-ನಿಯಮ (1) ರ ಅಡಿಯಲ್ಲಿ ನೀಡಲಾದ ಸನ್ನದನ್ನು ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರ ನಿಯಮ 4-ಬಿ ಅಥವಾ ನಿಯಮ 4-ಸಿ ಪ್ರಕಾರ ಡಿಸ್ಟಿಲರಿ ಸನ್ನದನ್ನು ವರ್ಗಾಯಿಸಿದಾಗ ಮಾತ್ರ ವರ್ಗಾಯಿಸತಕ್ಕದ್ದು. ನಿಯಮ 4-ಸಿ ಅಡಿಯಲ್ಲಿ ಸನ್ನದು ವರ್ಗಾವಣೆಯ ಸಂದರ್ಭದಲ್ಲಿ, ಸನ್ನದು ವರ್ಗಾವಣೆ ಶುಲ್ಕವು ಉಪ-ನಿಯಮ (3) ರಲ್ಲಿ ನಿರ್ದಿಷ್ಟಪಡಿಸಿದ ವಾರ್ಷಿಕ ಸನ್ನದು ಶುಲ್ಕದ ಇಪ್ಪತ್ತೈದು ಪ್ರತಿಶತಕ್ಕೆ ಸಮಾನವಾಗಿರುತ್ತದೆ.

(8) ಈ ಸನ್ನದಿನ ಅಡಿಯಲ್ಲಿ ಮದ್ಯದ ರುಚಿ ನೋಡುವ ಅಥವಾ ಮಾರಾಟ ಮಾಡುವ ಸವಲತ್ತು ಆಲ್ಕೋಹಾಲ್ ಪ್ರವಾಸೋದ್ಯಮದ ಪರಿಕಲ್ಪನೆಯಡಿಯಲ್ಲಿ ಡಿಸ್ಟಿಲರಿಗೆ ಭೇಟಿ ನೀಡುವ ಸಂದರ್ಶಕರಿಗೆ ಮಾತ್ರ ವಿಸ್ತರಿಸುತ್ತದೆ. ಈ ಸನ್ನದಿನ ಅಡಿಯಲ್ಲಿ ಮದ್ಯದ ಸಗಟು ಮಾರಾಟ ಅಥವಾ ಸಂದರ್ಶಕರಲ್ಲದವರಿಗೆ ಮದ್ಯ ಮಾರಾಟ ಮಾಡಲು ಅನುಮತಿ ಇರುವುದಿಲ್ಲ".

**4.** **<u>ಹೊಸ ನಮೂನೆಗಳು 2-ಬಿ ಮತ್ತು 2-ಸಿ ಗಳ ಸೇರ್ಪಡೆ</u>**:- ಸದರಿ ನಿಯಮಗಳ ನಮೂನೆ 2-ಎ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂನೆಗಳನ್ನು ಸೇರಿಸತಕ್ಕದ್ದು, ಅಂದರೆ:-

**"ನಮೂನೆ 2-ಬಿ**

**(ನಿಯಮ 4-ಇ ನೋಡಿ)**

**ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಸನ್ನದು ಮಂಜೂರಾತಿಗಾಗಿ ಅರ್ಜಿ**

ಗೆ,

ಅಬಕಾರಿ ಆಯುಕ್ತರು,

ಕರ್ನಾಟಕ ರಾಜ್ಯ,

ಬೆಂಗಳೂರು.

| | | |
|---|---|---|
| 1. | ಡಿಸ್ಟಿಲರಿಯ ಹೆಸರು ಮತ್ತು ವಿಳಾಸ | |
| 2. | ವ್ಯಕ್ತಿಗತ ಅಥವಾ ಸಂಸ್ಥೆ ಅಥವಾ ಕಂಪೆನಿ | |
| (ಎ) | ಸಂಸ್ಥೆಯಾಗಿದ್ದರೆ, ಎಲ್ಲಾ ಪಾಲುದಾರರ ಹೆಸರುಗಳು ಮತ್ತು ವಿಳಾಸಗಳ ಜೊತೆಗೆ ಪಾಲುದಾರಿಕೆ ಒಪ್ಪಂದದ ಪ್ರತಿ ಸಲ್ಲಿಸಬೇಕು; | |
| (ಬಿ) | ಕಂಪನಿಯಾಗಿದ್ದರೆ, ಕಂಪನಿಯ ಎಲ್ಲಾ ನಿರ್ದೇಶಕರ ಹೆಸರುಗಳು ಮತ್ತು ವಿಳಾಸಗಳ ಜೊತೆಗೆ ಕಂಪನಿಯ ಜ್ಞಾಪನ ಪತ್ರ ಹಾಗೂ ಸಂಘದ ನಿಯಮಾವಳಿಗಳ ಪ್ರತಿಯನ್ನು ಸಲ್ಲಿಸಬೇಕು | |
| 3. | ಪಾವತಿಸಿದ ಶುಲ್ಕದ ವಿವರಗಳು | |
| 4. | ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಸಿಬ್ಬಂದಿಯ ವಿವರಗಳು | |
| 5. | ನೀಲಿ ನಕ್ಷೆಯಲ್ಲಿ ತೋರಿಸಿರುವಂತೆ ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಆಗಿ ಬಳಸಲಾಗುವ ಆವರಣದ ವಿವರಗಳು | |

**ಘೋಷಣೆ**

1. ನಾನು/ನಾವು ಅರ್ಜಿಯಲ್ಲಿ ಸೂಚಿಸಿದ ವಿವರಗಳು ಸರಿಯಾಗಿದೆ ಎಂದು ಈ ಮೂಲಕ ಘೋಷಣೆ ಮಾಡುತ್ತೇನೆ/ವೆ.

2. ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರ ನಿಯಮ 6-ಎ ನಲ್ಲಿ ಉಲ್ಲೇಖಿಸಲಾದ ಕಾರಣಗಳಿಗಾಗಿ ನಾನು/ನಾವು ಅರ್ಜಿ ಸಲ್ಲಿಸಲು ಅನರ್ಹರಾಗಿಲ್ಲ/ಅನರ್ಹರಾಗಿರುವುದಿಲ್ಲ.
3. ನಾನು/ನಾವು ಸನ್ನದಿಗಾಗಿ ಅರ್ಜಿ ಸಲ್ಲಿಸಿರುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ಅನ್ನು ತಿಳಿದುಕೊಂಡಿದ್ದೇನೆ/ವೆ ಮತ್ತು ಅದರಲ್ಲಿನ ಉಪಬಂಧಗಳ ತಿಳಿವಳಿಕೆಯುಳ್ಳವನ್ನಾಗಿದ್ದೇನೆ/ವೆ.
4. ಸನ್ನದು ಷರತ್ತುಗಳನ್ನು ಮತ್ತು ಕರ್ನಾಟಕ ಅಬಕಾರಿ ಅಧಿನಿಯಮ, 1965 ರ ಉಪಬಂಧಗಳು ಮತ್ತು ನಿಯಮಗಳು ಮತ್ತು ಅದರಡಿ ಮಾಡಿದ ನಿಬಂಧನೆಗಳನ್ನು ಪಾಲಿಸುವುದಾಗಿ ಈ ಮೂಲಕ ಒಪ್ಪಿಕೊಳ್ಳುತ್ತೇನೆ/ವೆ.

**ಸ್ಥಳ:**

**ದಿನಾಂಕ:** **ಅರ್ಜಿದಾರ(ರು) ಹೆಸರು ಮತ್ತು ಸಹಿಗಳು**

**ನಮೂನೆ 2-ಸಿ**

**(ನಿಯಮ 4-ಇ ನೋಡಿ)**

**ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಆವರಣದಲ್ಲಿ ಮದ್ಯದ ರುಚಿ ನೋಡಲು ಮತ್ತು ಮಾರಾಟ ಮಾಡಲು ಸನ್ನದು**

**ಸನ್ನದು ಸಂಖ್ಯೆ............... ದಿನಾಂಕ:..................**

| | | |
|---|---|---|
| 1. | ಡಿಸ್ಟಿಲರಿಯ ಹೆಸರು ಮತ್ತು ವಿಳಾಸ<br>ಡಿಸ್ಟಿಲರಿ ಸನ್ನದು ಸಂಖ್ಯೆ | |
| 2. | ಡಿಸ್ಟಿಲರಿ ಇರುವ ಜಿಲ್ಲೆ | |
| 3. | ಪಾವತಿಸಿದ ಶುಲ್ಕದ ವಿವರಗಳು | |

ಕರ್ನಾಟಕ ರಾಜ್ಯದ ಅಬಕಾರಿ ಆಯುಕ್ತನಾದ..........................ಎಂಬ ಹೆಸರಿನ ನಾನು ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರ ನಿಯಮ 4-ಇ ಯ ಉಪಬಂಧಗಳಿಗನುಸಾರವಾಗಿ...............ನಿಮಗೆ (ಇನ್ನು ಮುಂದೆ "ಸನ್ನದುದಾರ" ಎಂದು ಉಲ್ಲೇಖಿಸಲಾಗುವುದು) ಈ ಕೆಳಕಂಡಂತೆ ನಮೂದಿಸಿರುವ ಷರತ್ತುಗಳಿಗೆ ಬದ್ಧವಾಗಿ ಡಿಸ್ಟಿಲರಿಯ ……………… ಆವರಣದಲ್ಲಿ ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ಅನ್ನು ನಡೆಸಲು ಸನ್ನದು ನೀಡುತ್ತಿದ್ದೇನೆ.

**<u>ಷರತ್ತುಗಳು</u>**

1. ಸನ್ನದುದಾರನು ಕರ್ನಾಟಕ ಅಬಕಾರಿ ಅಧಿನಿಯಮ, 1965 ರ ಉಪಬಂಧಗಳು ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ಅಧಿಸೂಚನೆಗಳು, ನಿಯಮಗಳು ಮತ್ತು ಆದೇಶಗಳು ಹಾಗೂ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ಕ್ಕೆ ಬದ್ಧನಾಗಿರತಕ್ಕದ್ದು.

2. ಸನ್ನದುದಾರನು ಮದ್ಯದ ಮಾರಾಟ, ಸ್ವಾಧೀನತೆ ಮತ್ತು ವಿತರಣೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿಗದಿಪಡಿಸಿದ ನಿಯಮಗಳನ್ನು ಅಥವಾ ಕಾಲಕಾಲಕ್ಕೆ ಅಬಕಾರಿ ಆಯುಕ್ತರು ನೀಡುವಂತಹ ಸೂಚನೆಗಳು ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು.
3. ಸನ್ನದುದಾರನು ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರ ನಿಯಮ 4-E ಗೆ ಒಳಪಟ್ಟು ಮದ್ಯದ ಸರಬರಾಜನ್ನು ಪಡೆಯತಕ್ಕದ್ದು.
4. 375 ಮಿಲಿಗಿಂತ ಕಡಿಮೆಯಿಲ್ಲದ ಮುಚ್ಚಿದ ಬಾಟಲಿಗಳು ಅಥವಾ ಇತರೆ ಮುಚ್ಚಿದ ಪ್ಯಾಕೇಜಿಂಗ್ ಕಂಟೈನರ್‌ಗಳಲ್ಲಿ ಒಬ್ಬ ಸಂದರ್ಶಕನಿಗೆ ಮಾರಾಟ ಮಾಡಬಹುದಾದ ಮದ್ಯದ ಗರಿಷ್ಠ ಪ್ರಮಾಣವು, ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967 ರ ನಿಯಮ 21 ರ ಅಡಿಯಲ್ಲಿ ಆಯಾ ವರ್ಗದ ಮದ್ಯಗಳಿಗೆ ನಿಗದಿಪಡಿಸಿದ ಗರಿಷ್ಠ ಪ್ರಮಾಣವನ್ನು ಮೀರತಕ್ಕದ್ದಲ್ಲ.
5. ಸನ್ನದುದಾರನು ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ರ ನಿಯಮ 2-AF ಅಡಿಯಲ್ಲಿ ಘೋಷಿಸಲಾದಂತೆ ಬಾಟಲಿಗಳ ಲೇಬಲ್‌ಗಳ ಮೇಲೆ ಮುದ್ರಿಸಿರುವ ಗರಿಷ್ಠ ಮಾರಾಟ ಬೆಲೆಗೆ ಮದ್ಯವನ್ನು ಮಾರಾಟ ಮಾಡತಕ್ಕದ್ದು ಮತ್ತು ಅದಕ್ಕೆ ಅನುಗುಣವಾಗಿ ಸಂದರ್ಶಕರಿಗೆ ರಸೀದಿಗಳನ್ನು ನೀಡತಕ್ಕದ್ದು,
6. ಸಂದರ್ಶಕರಿಗೆ ಅದೇ ಸನ್ನದುದಾರನಿಂದ ತಯಾರಿಸಲಾದ ಮದ್ಯವನ್ನು ಸವಿಯಲು ಅವಕಾಶ ನೀಡಬಹುದು. ಆದಾಗ್ಯೂ, ಪ್ರತಿ ಮದ್ಯದ ಮಾದರಿಯ ಪ್ರಮಾಣವು 30 ಮಿಲಿ ಮೀರಬಾರದು.
7. ರುಚಿ ನೋಡುವ ಉದ್ದೇಶಕ್ಕಾಗಿ ಬಳಸಲಾಗುವ ಅಥವಾ ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್‌ನಲ್ಲಿ ಮುಚ್ಚಿದ ಬಾಟಲಿಗಳು ಅಥವಾ ಇತರೆ ಮುಚ್ಚಿದ ಪ್ಯಾಕೇಜಿಂಗ್ ಕಂಟೈನರ್‌ಗಳಲ್ಲಿ ಮಾರಾಟ ಮಾಡುವ ಮದ್ಯವನ್ನು ಸನ್ನದುದಾರನು ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ (ಕೆಎಸ್‌ಬಿಸಿಎಲ್)ದ ರಹದಾರಿಯ ಆಧಾರದ ಮೇಲೆ ಮಾತ್ರ ಖರೀದಿಸತಕ್ಕದ್ದು.
8. ಸನ್ನದುದಾರನು ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಅನುಮೋದಿಸಲಾದ ಮೆಟ್ರಿಕ್ ಅಳತೆಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು.
9. ನಿಯಮಗಳಿಗೆ ಅನುಸಾರವಾಗಿ ಹೊರತು ಸನ್ನದನ್ನು ವರ್ಗಾಯಿಸಲಾಗುವುದಿಲ್ಲ.
10. ಪರವಾನಗಿಯ ಯಾವುದೇ ಷರತ್ತುಗಳ ಉಲ್ಲಂಘನೆಗೆ ಅಧಿಕೃತ ವ್ಯಕ್ತಿಗಳು ಅಥವಾ ಸಂದರ್ಭಾನುಸಾರ ಮಾರಾಟಗಾರರು ಪರವಾನಗಿ ಹೊಂದಿರುವವರೊಂದಿಗೆ ಸಮಾನವಾಗಿ ಜವಾಬ್ದಾರರಾಗಿರುತ್ತಾರೆ.
11. ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 29 ರ ಉಪಬಂಧಗಳ ರೀತ್ಯಾ ಸನ್ನದನ್ನು ಅಮಾನತ್ತು ಅಥವಾ ರದ್ದುಪಡಿಸಬಹುದಾಗಿರುತ್ತದೆ ಮತ್ತು ಅಬಕಾರಿ ಕಾಯಿದೆ ನಿಬಂಧನೆಗಳು ಅಥವಾ ನಿಯಮಗಳು ಮತ್ತು ಆದೇಶಗಳ ರೀತ್ಯಾ ವಿಧಿಸಿರುವ ಯಾವುದೇ ಸನ್ನದು ಷರತ್ತುಗಳ ಉಲ್ಲಂಘನೆಗೆ ಸನ್ನದುದಾರ ಅಥವಾ ಆತನ ನೌಕರ ಕಾನೂನು ಕ್ರಮಕ್ಕೆ ಹೊಣೆಗಾರರಾಗಿರುತ್ತಾರೆ.
12. ಸನ್ನದು ದಿನಾಂಕ .................. ರವರೆಗೆ ಚಾಲ್ತಿಯಲ್ಲಿರುತ್ತದೆ.
13. ಪರವಾನಗಿದಾರರು ನಮೂನೆ 15 ರಲ್ಲಿರುವ ಸ್ಟಾಕ್ ಬುಕ್-1 ರಲ್ಲಿ ವಹಿವಾಟುಗಳ ಸರಿಯಾದ ದೈನಂದಿನ ಖಾತೆಗಳನ್ನು ನಿರ್ವಹಿಸಲು ಬದ್ಧರಾಗಿರುತ್ತಾರೆ ಮತ್ತು ಪ್ರತಿ ತಿಂಗಳು ಮುಂದಿನ ತಿಂಗಳ ಮೊದಲ ವಾರದೊಳಗೆ ಸಂಬಂಧಪಟ್ಟ ಡಿಸ್ಟಿಲರಿ ಅಬಕಾರಿ ಅಧಿಕಾರಿಗೆ ರಿಟರ್ನ್ ಸಲ್ಲಿಸಬೇಕು.

14. ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್‌ಗೆ ಭೇಟಿ ನೀಡುವ ಸಂದರ್ಶಕರ ವಿವರಗಳನ್ನು ನಿರ್ವಹಿಸತಕ್ಕದ್ದು.
15. ಡಿಸ್ಟಿಲರಿ ಫ್ಯಾಕ್ಟರಿ ಔಟ್-ಲೆಟ್ ತೆರೆಯುವ ಮತ್ತು ಮುಚ್ಚುವ ವೇಳೆ ಬೆಳಿಗ್ಗೆ 10.00 ರಿಂದ ಸಂಜೆ 7.00 ರವರೆಗೆ ಇರುತ್ತದೆ.

**ಅಬಕಾರಿ ಆಯುಕ್ತರು**".

5. **ಹೊಸ ನಮೂನೆ 15 ರ ಸೇರ್ಪಡೆ**:- ಸದರಿ ನಿಯಮಗಳ ನಮೂನೆ 14 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:-

**"ನಮೂನೆ 15**

**[ನಿಯಮ 4-ಇ (5) ನೋಡಿ]**

**ಸ್ಟಾಕ್ ಬುಕ್-1**

ಸನ್ನದುದಾರನು ನಿರ್ವಹಿಸಬೇಕಾದ ದೈನಂದಿನ ಲೆಕ್ಕಪತ್ರ ಪುಸ್ತಕ

| ದಿನಾಂಕ | | ಬ್ರಾಂಡ್ ಹೆಸರು | ಬ್ರಾಂಡ್ ಹೆಸರು | ಬ್ರಾಂಡ್ ಹೆಸರು | ಬ್ರಾಂಡ್ ಹೆಸರು | ಸನ್ನದುದಾರ/ಅಧಿಕೃತ ವ್ಯಕ್ತಿಯ ಸಹಿ | ಷರಾ |
|---|---|---|---|---|---|---|---|
| | | ಬಾಟಲಿಯ ಗಾತ್ರ (ಮಿ.ಲೀ.) | ಬಾಟಲಿಯ ಗಾತ್ರ (ಮಿ.ಲೀ.) | ಬಾಟಲಿಯ ಗಾತ್ರ (ಮಿ.ಲೀ.) | ಬಾಟಲಿಯ ಗಾತ್ರ (ಮಿ.ಲೀ.) | | |
| | ಪ್ರಾರಂಭಿಕ ಶಿಲ್ಕು | | | | | | |
| | ಸ್ವೀಕೃತಿ | | | | | | |
| | ಮಾರಾ ಟ | | | | | | |
| | ಅಖೈರು ಶಿಲ್ಕು | | | | | | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-

(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

**GOVERNMENT OF KARNATAKA**

No. FD 11 PES 2025

Karnataka Government Secretariat
Vidhana Soudha,
Dr. B.R. Ambedkar Veedhi,
Bengaluru, Dated: 08.05.2026.

**NOTIFICATION-II**

The draft of the following Rules to further amend the Karnataka Excise (Possession, Transport, Import and Export of Intoxicants) Rules, 1967, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said section for information of all persons likely to be affected thereby and notice is hereby given that the said draft will be taken up for consideration after seven days from the date of its publication in the official Gazette.

Any objections or suggestions which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

**DRAFT RULES**

1. **Title and commencement:-** (1) These Rules may be called the Karnataka Excise (Possession, Transport, Import and Export of Intoxicants) (Amendment) Rules, 2026.

(2) They shall come into force from the date of their final publication in the official Gazette.

**2. Amendment of Rule 6:-** the Karnataka Excise (Possession, Transport, Import and Export of Intoxicants) Rules, 1967, in Rule 6, in sub-rule (1), after the words, brackets and figures "the Karnataka Excise (Brewery) Rules, 1967", the words, brackets and figures "and in Form 2-C issued under the Karnataka Excise (Distillery and Warehouse) Rules, 1967" shall be inserted.

**By Order and in the Name of**
**The Governor of Karnataka**
Sd/-

**BHIMAPPA PA AJOOR**
**Under Secretary to Government,**
**Finance Department (Excise)**

**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 11 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 08.05.2026.

**ಅಧಿಸೂಚನೆ-II**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಏಳು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ** :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**2. 6 ನೇ ನಿಯಮದ ತಿದ್ದುಪಡಿ**:- ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967 ರ 6 ನೇ ನಿಯಮದಲ್ಲಿ, ಉಪ-ನಿಯಮ (1) ರಲ್ಲಿ, "ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳು, 1967" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳ ತರುವಾಯ "ಮತ್ತು ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ರ ಅಡಿಯಲ್ಲಿ ನೀಡಲಾದ ನಮೂನೆ 2-ಸಿ ನಲ್ಲಿ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/-
(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH